<u>ಅಸಲು ದಾವಾ ಸಂಖ್ಯೆ: **- 179/2020**</u>　　　　ಪಿ.ಡಬ್ಲ್ಯೂ**:-3**

ದಿನಾಂಕಃ **07-07-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು ರೈತಾಪಿ ಕೆಲಸವನ್ನು ಮಾಡುತ್ತೇನೆ. ನಾನು ಲಕ್ಕಿನಕೊಪ್ಪ ಗ್ರಾಮದ ವಾಸಿ. ಲಕ್ಕಿನಕೊಪ್ಪ ಗ್ರಾಮವು ನ್ಯಾಮತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಊರಿನಲ್ಲಿದ್ದಾಗ ಕುಮಾರ್ ನಾಯ್ಕರವರು ನನಗೆ ಕರೆ ಮಾಡಿ ಹೊನ್ನಾಳಿ ಉಪನೋಂದಣಿ ಕಚೇರಿಗೆ ಬರುವಂತೆ ತಿಳಿಸಿದ ಮೇರೆಗೆ ನಾನು ಬಂದಿರುತ್ತೇನೆ. ಬೋಜಾನಾಯ್ಕ ನನಗೆ ಗೊತ್ತು. ನಾನು ಉಪನೋಂದಣಿ ಕಚೇರಿಗೆ ಬಂದಾಗ ವಾದಿ ಮತ್ತು 1 ನೇ ಪ್ರತಿವಾದಿ ಇದ್ದರು. ಈ ದಿನ ವಾದಿ ನನಗೆ ಕರೆ ಮಾಡಿ ನ್ಯಾಯಾಲಯಕ್ಕೆ ಬನ್ನಿ ಎಂದು ಹೇಳಿದ್ದರು ಎಂದರೆ ಸರಿ. ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿಯನ್ನಾಗಿ ಹೇಳಲು ವಾದಿಯು ಕರೆದಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿ ಮತ್ತು ಅವರ ಮಗ ವಾದಿಗೆ ಸರ್ವೆ ನಂ.25 ರಲ್ಲಿ 24 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಿಪಿ-1 ಕ್ರಯ ಪತ್ರಕ್ಕೆ ನಾನು ಹೋಗುವ ಮೊದಲೇ ಸಹಿಯನ್ನು ಮಾಡಿದ್ದರು. ನಿಪಿ-1 ಕ್ರಯದ ಕರಾರು ಪತ್ರಕ್ಕೆ ಮೊದಲು ಸಹಿಯನ್ನು ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಎಲ್ಲಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ಪತ್ರಕ್ಕೆ ಸಂಬಂಧಪಟ್ಟಂತೆ ನನ್ನ ಮುಂದೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ನಾನು ಸಹಿಯನ್ನು ಮಾತ್ರ ಮಾಡಿರುತ್ತೇನೆ. ಕುಮಾರ್ ನಾಯ್ಕರವರಿಗೆ 3 ಜನ ಮಕ್ಕಳು. ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ಕ್ಕೆ ಕುಮಾರ್ ನಾಯ್ಕರವರ ಒಬ್ಬ ಮಗ ಸಹಿ ಮಾಡಿದ್ದಾನೆ ಉಳಿದ ಇಬ್ಬರೂ ಸಹಿ ಮಾಡಿರುವುದಿಲ್ಲ. ನಿಪಿ-1 ಪತ್ರವನ್ನು ತೋಟಪ್ಪರವರು ತಯಾರು

ಮಾಡಿರುತ್ತಾರೆ ಆದರೆ ಯಾವ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ನಿಪಿ-1 ಪತ್ರಕ್ಕೆ ಸಂಬಂಧಪಟ್ಟಂತೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ನಾನು ವಾದಿಯೊಂದಿಗೆ ವಿಶ್ವಾಸದಲ್ಲಿದ್ದೇನೆ ಎಂದರೆ ಸರಿ. ನಾನು ವಾದಿಯೊಂದಿಗೆ ವಿಶ್ವಾಸದಲ್ಲಿದುದ್ದರಿಂದ ಈ ದಾವೆಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗಪ್ಪ ರವರಿಗೂ ಸಹ ನಿಪಿ-1 ಪತ್ರದ ವ್ಯವಹಾರದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-1 ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ಮಾತುಕೇಳಿಕೊಂಡು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.